ದಿಃ 10.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ಶ್ರೀ ಐ.ಎಮ್.ಎಚ್. ವಕೀಲರಿಂದ ,</u>**

7. ಆರೋಪಿ ನನಗೆ ಮೊದಲಿನಿಂದಲೂ ಪರಿಚಯ ಎಂದರೆ ಸರಿ. ನನ್ನ ಹಾಗೂ ಆರೋಪಿ ನಡುವೆ ಮೊದಲಿಗೆ ಯಾವುದೇ ಹಣಕಾಸಿನ ವ್ಯವಹಾರ ಇರಲಿಲ್ಲ. ನನ್ನ ಹಾಗೂ ಆರೋಪಿ ನಡುವೆ ಸಾಲದ ವ್ಯವಹಾರ ಆಗುವ 3 ವರ್ಷಗಳ ಹಿಂದಿನಿಂದ ನಾನು ಅವರು ಕರೆದಾಗ ಅವರಿಗೆ ಬಾಡಿಗೆ ಕಾರನ್ನು ಓಡಿಸುತ್ತಿದ್ದೆನು. ಆರೋಪಿ ಹಾಗೂ ಆತನ ಹೆಂಡತಿ ಇಬ್ಬರು ನನ್ನ ಬಳಿ ಸಾಲ ಕೇಳಿರುತ್ತಾರೆ. ಅವರು ನಮ್ಮ ಮನೆಗೆ ಬಂದು ಸಾಲ ಕೇಳಿರುತ್ತಾರೆ. ನನ್ನ ಹಾಗೂ ಆರೋಪಿ ನಡುವಿನ ಹಣದ ವ್ಯವಹಾರ ಹಾಗೂ ನಿಪಿ - 1 ಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ - 1 ಚೆಕ್ಕನ್ನು ಆರೋಪಿ ನನ್ನ ಮನೆಗೆ ಬಂದು ನೀಡಿರುತ್ತಾರೆ. ತುಂಗಾ ನಗರ ಪೋಲೀಸ್ ಠಾಣೆಯ ಸಿಬ್ಬಂದಿ ನನಗೆ ತಿಳಿದಿರುತ್ತಾರೆ ಎಂದರೆ ಸರಿಯಲ್ಲ. ಪೋಲೀಸರಲ್ಲಿ ಆರೋಪಿಯೇ ದೂರನ್ನು ದಾಖಲಿಸಿದ್ದರು. ಅವರು ದಿಃ 29-11-2022 ರಂದು ಉಂಬ್ಲೆಬೈಲುವಿನಲ್ಲಿ ದೂರು ದಾಖಲಿಸಿದ್ದರು. ಸದರಿ ದೂರಿನ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಆರೋಪಿಯ ಹೆಂಡತಿಗೆ ನೀಡಿದ್ದ ಸಾಲವನ್ನು ಮರುಪಾವತಿಸುವಂತೆ ದೂರವಾಣಿ ಕರೆ ಮಾಡಿ ಆಕೆಯನ್ನು ಅವಾಚ್ಯ ಶಬ್ಧಗಳಿಂದ ನಿಂದಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣ ಆಕೆ ನನ್ನ ವಿರುದ್ಧ ಪೋಲೀಸರಲ್ಲಿ ದೂರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಪೋಲೀಸರು ಹಣದ ಸಂಬಂಧ ನಮ್ಮ ವಿಚಾರಣೆ ಮಾಡಿರುತ್ತಾರೆ. ಪೋಲೀಸ್ ಠಾಣೆಯಲ್ಲಿ ಕಂತುಗಳಲ್ಲಿ ಹಣವನ್ನು ಮರುಪಾವತಿ ಮಾಡುವುದಾಗಿ ಆರೋಪಿ ಹಾಗೂ ಆತನ ಹೆಂಡತಿ ಒಪ್ಪಿಕೊಂಡಿರುತ್ತಾರೆ. ದಿಃ 1-02-2023 ರಂದು ರೂ. 2 ಲಕ್ಷ, ದಿಃ 1-06-2023 ರಂದು ರೂ. 2 ಲಕ್ಷ, ದಿಃ 1-10-2023 ರಂದು ರೂ. 2 ಲಕ್ಷ ಹಾಗೂ ದಿಃ 1-02-2024 ರಂದು ರೂ. 1,50,000/- ಗಳನ್ನು ನನಗೆ ಕೊಡುವುದಾಗಿ ಆರೋಪಿ

This is a True Copy of the Court Records Online. Authenticated @ districts.ecourtsindia.com/cnr/KASM300027892023/truecopy/order-2.pdf

ಹಾಗೂ ಆತನ ಹೆಂಡತಿ ಒಪ್ಪಿ ಸಹಿ ಮಾಡಿದ್ದರು. ಪೋಲೀಸ್ ಠಾಣೆಗೆ ಹೋದ ಸಮಯದಲ್ಲಿ ಆರೋಪಿಯ ಹೆಂಡತಿ ಮಾನಸಿಕ ಸಮತೋಲನ ಕಳೆದುಕೊಂಡಿದ್ದರು ಎಂದರೆ ಸರಿಯಲ್ಲ. ಪೋಲೀಸರು ಆರೋಪಿ ಹಾಗೂ ಆತನ ಹೆಂಡತಿಗೆ ಎದರಿಸಿ ಅವರ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪೋಲೀಸರು ನನ್ನ ಹಾಗೂ ಆರೋಪಿಯ ಇಬ್ಬರ ಹೇಳಿಕೆಗಳನ್ನು ಪಡೆದಿರುತ್ತಾರೆ. ಅವುಗಳ ನಕಲನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

8. ಆರೋಪಿ ಖಾತೆಯಲ್ಲಿ ಹಣ ಇಲ್ಲದ ಕಾರಣ ಚೆಕ್ಕು ಅಮಾನ್ಯಗೊಂಡಿರುತ್ತದೆ. ನಿಪಿ - 2 ರಲ್ಲಿ ಸಹಿ ತಾಳೆ ಆಗುವುದಿಲ್ಲ ಎಂದು ಸಹ ನಮೂದು ಇರುತ್ತದೆ ಎಂದರೆ ಸರಿ. ನಿಪಿ - 1 ಚೆಕ್ಕನ್ನು ನಾನು 2 ಬಾರಿ ಬ್ಯಾಂಕಿಗೆ ನಗದೀಕರಣಕ್ಕಾಗಿ ಹಾಜರು ಪಡಿಸಿರುತ್ತೇನೆ. ಮೊದಲ ಬಾರಿಗೆ ಚೆಕ್ಕು ಅಮಾನ್ಯಗೊಂಡಾಗ ನಾನು ಆರೋಪಿಗೆ ನೋಟೀಸು ನೀಡಿಲ್ಲ, ಆದರೆ ಖುದ್ದು ಭೇಟಿಯಾಗಿ ತಿಳಿಸಿರುತ್ತೇನೆ. ನಿಪಿ - 1 ಚೆಕ್ಕನ್ನು 2 ನೇ ಬಾರಿಗೆ ಬ್ಯಾಂಕಿಗೆ ಹಾಜರು ಪಡಿಸುವಂತೆ ಆರೋಪಿ ತಿಳಿಸಿಲ್ಲ ಎಂದರೆ ಸರಿಯಲ್ಲ.

9. ನಾನು 4- 5 ವರ್ಷಗಳಿಂದ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಹೇಳಿದಂತೆ ಆರೋಪಿಗೆ ರೂ. 7,50,000/- ಸಾಲ ನೀಡುವ ಶಕ್ತಿ ನನಗೆ ಇಲ್ಲ ಎಂದರೆ ಸರಿಯಲ್ಲ. ಪೋಲೀಸರ ಸಹಾಯದಿಂದ ಬಲವಂತವಾಗಿ ನಿಪಿ - 1 ಚೆಕ್ಕನ್ನು ನಾನು ಆರೋಪಿಯಿಂದ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಹಣವನ್ನು ನಗದಾಗಿ ನೀಡಿರುತ್ತೇನೆ. ಆರೋಪಿ ನನ್ನಿಂದ ಯಾವುದೇ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮವಾಗಿ ಹಣ ಪಡೆಯುವ ಸಲುವಾಗಿ ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

This is a True Copy of the Court Records Online. Authenticated @ districts.ecourtsindia.com/cnr/KASM300027892023/truecopy/order-2.pdf

www.ecourtsindia.com

www.ecourtsindia.com



ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ.ಶ್ರೀಕಾಂತ್)**
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**

This is a True Copy of the Court Records Online. Authenticated @ districts.ecourtsindia.com/cnr/KASM300027892023/truecopy/order-2.pdf